

◆ **ಚಿತ್ರಕಲೆಯಲ್ಲಿ ಪರಂಪರೆ, ಪ್ರಯೋಗ ಮತ್ತು ಹೊಸತನ ಇವುಗಳ ಸಂಬಂಧವನ್ನು ಹೇಗೆ ನೋಡಲಾಗುತ್ತದೆ? ಸಾಹಿತ್ಯದಲ್ಲಿ ಆಯಾ ಭಾಷೆಗಳ ಮೂಲಕ ಇದನ್ನು ಕಟ್ಟಿಕೊಳ್ಳಲು ಯತ್ನಿಸುತ್ತೇವೆ. ಚಿತ್ರಕಲೆಯಲ್ಲಿ ಪ್ರದೇಶಗಳ ಮೂಲಕ ಪರಂಪರೆ, ಪ್ರಯೋಗ ಮತ್ತು ಹೊಸತನ ಕಟ್ಟಿಕೊಳ್ಳಲಾಗುತ್ತದೆಯೆ ಅಥವಾ ಬೇರೆ ದಾರಿಗಳಿವೆಯೇ?**

ಚಿತ್ರಕಲೆ ಮೂಲತಃ ಚಿತ್ರಕಲಾವಿದರ ಸ್ವತಂತ್ರ ಅಭಿವ್ಯಕ್ತಿ. ಅವರು ಏನನ್ನು ಬಿಡಿಸಬೇಕು? ಹೇಗೆ ಬಿಡಿಸಬೇಕು? ಎಂಬ ನಿರ್ಧಾರವನ್ನು ತೆಗೆದುಕೊಳ್ಳಲು ಸ್ವತಂತ್ರರಾಗಿರುತ್ತಾರೆ. ಈ ಸ್ವಾತಂತ್ರ್ಯವೇ ಕಲಾವಿದರ ನಿಜವಾದ ಅಸ್ತಿತ್ವ. ಇಂಥ ಅಸ್ತಿತ್ವವನ್ನು ಉಳಿಸಿಕೊಳ್ಳುವ ಕಲಾವಿದರಿಂದ ಮಾತ್ರ ಪರಂಪರೆಗೆ ಅರ್ಥ ಬರುತ್ತದೆ. ಆರಂಭದಲ್ಲಿ ಕಲಾವಿದರು ತಮ್ಮ ಜೀವನಾನುಭವ, ಪರಿಸರ, ವಿಚಾರಗಳಿಂದ ತಮ್ಮ ಕಲಾಕೃತಿಗಳನ್ನು ಕಲ್ಪಿಸಿಕೊಳ್ಳುತ್ತಿದ್ದರು. ಈ ಪ್ರಕ್ರಿಯೆ ಕೆಲವೊಮ್ಮ ಸಹಜ ಮತ್ತು ಸ್ವಯಂಸ್ಫೂರ್ತವಾಗಿರುತ್ತದೆ. ಕೆಲವೊಮ್ಮೆ ಜಟಿಲ ಮತ್ತು ದೀರ್ಘಕಾಲೀನವಾದದ್ದು. ಕಲೆಯ ಎರಡನೇ ಹಂತದಲ್ಲಿ ಕಲಾವಿದರು ತಮ್ಮ ನೈಪುಣ್ಯ ಮತ್ತು ಕಲ್ಪನೆ ನಡುವೆ ಬೆಸುಗೆ ಹಾಕಲು ಯತ್ನಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಕಲಾವಿದರು ತಮ್ಮ ಚಿಂತನೆ, ಅಮೂರ್ತ ಕಲ್ಪನೆಗಳನ್ನು ಕ್ಯಾನ್‌ವಾಸಿನ ಮೇಲೆ ತರಲು ಪ್ರಯತ್ನಿಸುವರು. ವಿಷಾದದ ಸಂಗತಿ ಏನೆಂದರೆ, ಆರಂಭದಲ್ಲಿ ನಮ್ಮ ಕಲಾವಿದರಿಗೆ ತಾವೇನು ಬಿಡಿಸಬೇಕೆಂಬುದರ ಬಗ್ಗೆ ಸ್ವಾತಂತ್ರ್ಯವಿರಲಿಲ್ಲ. ಉದಾಹರಣೆಗೆ, ಅಜಂತಾ, ಖುಜರಾಹೊ ಮತ್ತು ಕೊನಾರ್ಕ್ ಇತ್ಯಾದಿಗಳಲ್ಲಿನ ಭಿತ್ತಿಚಿತ್ರಗಳು, ಮೂರ್ತಿಶಿಲ್ಪಗಳು ಸ್ವತಃ ಕಲಾವಿದರ ಕಲ್ಪನೆಗಳಲ್ಲ. ಅವುಗಳನ್ನು ಬೇರೆಯವರು ನಿರ್ದೇಶಿಸಿದರು. ಕಲಾವಿದರು ತಮ್ಮ ಕೌಶಲ್ಯವನ್ನು ಬಳಸಿ ಇವುಗಳನ್ನು ಚಿತ್ರಿಸಿದರು. ಕಲಾವಿದರ ಶ್ರಮ ಮತ್ತು ಉತ್ಕೃಷ್ಟವಾದ ನೈಪುಣ್ಯದಿಂದ ಇವು ರೂಪುಗೊಂಡವು. ಆದರೆ ಇವು ಕಲಾವಿದರ ಸ್ವತಂತ್ರ ಚಿಂತನೆಯಿಂದ ರೂಪುಗೊಂಡವುಗಳಲ್ಲ. ಸ್ವಾತಂತ್ರ್ಯವಿಲ್ಲದ ಕಲೆಯಲ್ಲಿ ನೈಪುಣ್ಯತೆ ಅರ್ಥವಿಲ್ಲದ್ದು. ಅಜಂತಾ, ಸಾಂಚಿಯಲ್ಲಿ ಬುದ್ಧನ ಜಾತಕ ಕಥೆಗಳ ಚಿತ್ರಗಳಿವೆ. ಅನೇಕ ದೇವಾಲಯಗಳಲ್ಲಿ ಹಿಂದೂ ಧರ್ಮದ ದೇವಾನುದೇವತೆಗಳ ಚಿತ್ರಗಳಿವೆ. ಯುರೋಪಿನ ಹಲವು ಚರ್ಚ್‌ಗಳಲ್ಲಿ ಕೂಡ ಬೈಬಲ್‌ನ ಕಥೆಗಳಿವೆ.